# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ</u>

**<u>ಸಿ.ಸಿ.ನಂ.1878/2021</u>**

1) ಶಂಕರ ಹೊಳಬಸಪ್ಪ ಸಂಕನ್ನವರ,
ಸಾಃ ಆಸಂಗಿ.

.....ಫಿರ್ಯಾದಿದಾರ

- ವಿರುದ್ಧ -

1) ಆನಂದ ಕಾಶಪ್ಪ ಮರಾಠೆ,
ಸಾಃ ಆಸಂಗಿ.

......ಆರೋಪಿ

**<u>- ಆಪಾದನೆ -</u>**

ನಾನು ಶ್ರೀಮತಿ ಶುಷ್ಮ ಟಿ.ಸಿ. ಬಿ.ಕಾಂ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿತರಾದ ನೀವು ಫಿರ್ಯಾದಿದಾರರಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.6,50,000/- ಗಳ ಪಾವತಿಗಾಗಿ ನಿಮ್ಮ ಖಾತೆ ಇರುವ ಐಸಿಐಸಿಐ ಬ್ಯಾಂಕ್ ಶಾಖೆ ರಬಕವಿ ಬ್ಯಾಂಕಿನ ಚೆಕ್ ನಂ.164824ನ್ನು ರೂ.6,50,000/-ಗಳಿಗೆ 27-10-2021 ರ ದಿನಾಂಕ ನಮೂದಿಸಿ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಸದರಿ ಚೆಕ್ಕನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು **"Account closed"** ಎನ್ನುವ ಹಿಂಬರಹದೊಂದಿಗೆ ದಿನಾಂಕ 27-10-2021 ರಂದು ಸದರಿ ಚೆಕ್ಕು ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ನಿಮಗೆ ದಿನಾಂಕ 08-11-2021 ರಂದು ಲೀಗಲ್ ನೋಟೀಸನ್ನು ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕ 10-11-2021 ರಂದು ಜಾರಿಯಾಗಿ ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ- ತಿಳಿಯಿತು.

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ- ಸುಳ್ಳು , ವಿಚಾರಣೆಯಾಗಬೇಕು.

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸಹಿ/-

ಸ್ಥಳ : ಬನಹಟ್ಟಿ
ದಿನಾಂಕ : 27-10-2022

ಪ್ರ.ದ.ನ್ಯಾ. ದಂಡಾಧಿಕಾರಿಗಳು ,
ಬನಹಟ್ಟಿ.